ಉತ್ತರ

1. ಗ್ರಾಮ ಪಂಚಾಯತಿ ನೌಕರರನ್ನು ಆಂತರಿಕ ವರ್ಗಾವಣೆ ಮಾಡಲು ಬರುವುದಿಲ್ಲ. ಆದರೆ ಸದರೀ ಗ್ರಾಮ ಪಂಚಾಯತ್ ನೌಕರರು ಸರ್ಕಾರಿ ನೌಕರರಲ್ಲ. ಅವರುಗಳು ಶಿಸ್ತನ್ನು ಪಾಲಿಸದೇ ಇದ್ದಲ್ಲಿ ಕರ್ತವ್ಯದಿಂದ ತೆಗೆದುಹಾಕಲು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 113ರಲ್ಲಿ ಅವಕಾಶವಿದೆ.

2. ಹೌದು. ಇದರ ಬಗ್ಗೆ ಪರಿಶೀಲಿಸಲು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ವಹಿಸಲಾಗಿದ್ದು ಅವರಿಂದ ವರದಿ ಬಂದಿದ್ದು ಅದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

3. ವರದಿಯನ್ನು ಪರಿಶೀಲಿಸಿದ ನಂತರ ಕೋಡ್‌ನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಆಸ್ಪತ್ರೆಯ ವಿವರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 221(666)

ಸದಸ್ಯರ ಹೆಸರು: ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ)

ಉತ್ತರಿಸುವ ಸಚಿವರು: ಡಾ॥ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಮೈಸೂರು ತಾಲ್ಲೂಕಿನ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳು ಎಷ್ಟು? ಪಿ.ಹೆಚ್.ಯು.ಗಳೆಷ್ಟು ಪಿ.ಹೆಚ್.ಸಿ.ಗಳೆಷ್ಟು?

ಆ) ದಡದಕಳ್ಳಿ ಹಳ್ಳಿ ಗ್ರಾಮದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣವಾಗಿದ್ದರೂ ಅಲ್ಲಿ ವೈದ್ಯಕೀಯ ಚಿಕಿತ್ಸೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ರೀತಿಯ ಪರಿಸ್ಥಿತಿ ಎಷ್ಟು ಇದೆ?

ಇ) ದಡದಕಳ್ಳಿ ಹಳ್ಳಿಯಲ್ಲಿ ಆಸ್ಪತ್ರೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಈ) ಮೈಸೂರು ನಗರದ ವಿವಿಧ ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿ ನೇಮಕ

ಮಾಡಲಾಗಿದೆ ಇಲ್ಲವಾದಲ್ಲಿ ಯಾವಾಗ ನೇಮಕ ಮಾಡಲಾಗುವುದು?

ಉ) ದೊಡ್ಡ ಆಸ್ಪತ್ರೆಗೆ (ಕೆ.ಆರ್.ಆಸ್ಪತ್ರೆ) ನೇಮಕ ಮಾಡಿರುವ ಸಂದರ್ಶಕ ಸಮಿತಿಗೆ ಗ್ರಾಮಾಂತರ ಪ್ರತಿನಿಧಿಗಳ ನೇಮಕ ಮಾಡಲಾಗಿದೆಯೇ; ವಿವರ ನೀಡುವುದು?

ಉತ್ತರ

ಅ) ಮೈಸೂರು ತಾಲ್ಲೂಕಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿನ ಆಸ್ಪತ್ರೆಗಳ ಸಂಖ್ಯೆ ಹೀಗಿದೆ.

ಪ್ರಾ.ಆ. ಕೇಂದ್ರಗಳು 13

ಪ್ರಾ.ಆ. ಘಟಕಗಳು 02

ಹೊರ ರೋಗಿಗಳ ಚಿಕಿತ್ಸಾಲಯಗಳು 01(ಚಾಮುಂಡಿ ಬೆಟ್ಟ ಆಯುರ್ವೇದಿಕ್ ಚಿಕಿತ್ಸಾಲಯಗಳು-4

ಆ) ದಡದಕಳ್ಳಿ ಹಳ್ಳಿ ಆಸ್ಪತ್ರೆ ಅಥವಾ ಉಪಕೇಂದ್ರವು ಮಂಜೂರಾಗಿರುವುದಿಲ್ಲ ಜಿಲ್ಲಾ ಪಂಚಾಯ್ತಿ ವತಿಯಿಂದ ಈ ಗ್ರಾಮದಲ್ಲಿ ಒಂದು ಉಪಕೇಂದ್ರ ಸ್ಥಾಪನೆಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಈ ರೀತಿಯ ಪರಿಸ್ಥಿತಿ ಬೇರೆಡೆ ಇರುವುದಿಲ್ಲ.

ಇ) 'ಆ'ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೈಸೂರು ನಗರದಲ್ಲಿ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಪಿಕೆಟಿಬಿ ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿಗಳನ್ನು ನೇಮಕ ಮಾಡಲಾಗಿದೆ.

ಉ) ರಾಜ್ಯದಲ್ಲಿಯ ಸರ್ಕಾರಿ ಆಸ್ಪತ್ರೆಗಳಿಗೆ ಸಂದರ್ಶಕ ಸಮಿತಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಆಕುಕ 28 ಎಸ್ ಬಿಎಸ್ 95ದ ದಿನಾಂಕ 22-6-1998ರಲ್ಲಿ ಹೊರಡಿಸುವ ಮಾರ್ಗಸೂಚಿಯ ಪ್ರಕಾರ ರಚಿಸಲಾಗುತ್ತಿದೆ.

ಮೈಸೂರು ನಗರ ಮತ್ತು ತಾಲ್ಲೂಕಿನ ಆಸ್ಪತ್ರೆಗಳಿಗೆ ಔಷಧ ಮತ್ತು ಯಂತ್ರಗಳ ಸರಬರಾಜು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 222(668)